ಎನ್‌ಜಿಇಎಫ್ ಟಾರ್ಪೆಡೊ ವ್ಯವಹಾರದ ಬಗ್ಗೆ

೬೮೩. (ಎ) ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಎಚ್‌ಜಿ ಭಾರತದಲ್ಲಿ ಟಾರ್ಪೆಡೋಗಳನ್ನು ಮಾರಾಟ ಮಾಡಿರುವುದು ವಾಸ್ತವವೆ ?

ಆ) ಹಾಗಾದರೆ ಹಾಗೆ ಮಾರಾಟ ಮಾಡಿದ ಒಟ್ಟು ಮೌಲ್ಯ ;

ಇ) ಈ ಬಾಬ್ತಿನ ಮಾರಾಟದಿಂದ ಎನ್‌ಜಿಇಎಫ್ ಸ್ವೀಕರಿಸಿದ ಹಾಗೂ ವಾಸ್ತವವಾಗಿ ಲೆಕ್ಕ ಹಾಕಲಾದ ಕಮಿಷನ್‌ನ ಮೊಬಲಗು ;

ಈ) ಕಮಿಷನನ್ನು ಸ್ವೀಕರಿಸಿಲ್ಲದಿದ್ದರೆ ಅದಕ್ಕೆ ಕಾರಣಗಳು ಮತ್ತು ಅದನ್ನು ವಸೂಲಿ ಮಾಡಲು ಕೈಗೊಂಡ ಕ್ರಮ ;

ಉ) ಈ ವ್ಯವಹಾರದಲ್ಲಿ ಒಳಗೊಂಡ ಅಧಿಕಾರಿಗಳ ಹೆಸರು ಹಾಗೂ ಅವರ ಮೇಲೆ ಕೈಗೊಂಡ ಕ್ರಮವೇನು ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕಾ, ಇಂಧನ ಹಾಗೂ ವಕ್ಫ್ ಸಚಿವರು).—

ಅ) ಹೌದು.

ಆ) ಸುಮಾರು ೧೬೦ ಕೋಟಿ ರೂ.ಗಳು.

ಇ) ಇದುವರೆಗೆ ಎನ್‌ಜಿಇಎಫ್ ಯಾವುದೇ ಕಮಿಷನನ್ನು ಸ್ವೀಕರಿಸಿಲ್ಲ. ಆದರೂ, ಎನ್‌ಜಿಇಎಫ್ ಶೇಕಡ ೨.೫ ಕಮಿಷನನ್ನು ಕ್ಲೈಮ್ ಮಾಡಿದೆ. ಹಾಗೂ ೧೯೮೮-೮೯ನೇ ಹಣಕಾಸು ವರ್ಷದ ಲೆಕ್ಕಪತ್ರದಲ್ಲಿ ಈ ಬಾಬ್ತಿಗಾಗಿ ಎಜಿಯಿಂದ ಬರಬೇಕಾದ ಮೊಬಲಾಗಿ ಇದನ್ನು ಲೆಕ್ಕ ಹಾಕಿದೆ.

ಈ) ರಕ್ಷಣಾ ಪಲಯಕ್ಕೆ ತಾವು ಮಾಡಿದ ಸರಬರಾಜುಗಳು ಏಜೆನ್ಸಿ ಒಪ್ಪಂದದ ವ್ಯಾಪ್ತಿಯಿಂದ ಹೊರತಾದುದು ಎನ್ನುವ ಕಾರಣದ ಮೇಲೆ ಎಜಿಯವರು ಕಮೀಷನ್‌ಗಾಗಿ ಎನ್‌ಜಿಇಎಫ್ ಮಾಡಿದ ಕ್ಲೈಮ್‌ನ್ನು ಒಪ್ಪಿಕೊಂಡಿಲ್ಲ. ಎಜಿಯವರ ಈ ನಿಲುವನ್ನು ಎನ್‌ಜಿಇಎಫ್ ಪ್ರಶ್ನಿಸಿದೆ. ಹಾಗೂ ಈ ವಿಷಯ ಕುರಿತು ಎಜಿ ಜೊತ ವ್ಯವಹರಿಸಲಾಗುತ್ತಿದೆ.

ಉ) ಉದ್ಭವಿಸುವುದಿಲ್ಲ.

ಬೆಳಗಾಂ ಮತ್ತು ಖಾನಾಪುರ ತಾಲ್ಲೂಕುಗಳಲ್ಲಿ ವಿಶೇಷ ಘಟಕ ಯೋಜನೆಯಡಿ ನೀರಾವರಿ ಕೊಳವೆ ಬಾವಿಗಳನ್ನು ಕೊರೆದಿರುವ ಬಗ್ಗೆ

೬೮೪. ಶ್ರೀ ಮೊಡಗೇಕರ್ ದೇಸಾಯಿ (ಬಾಗೇವಾಡಿ).—ಮಾನ್ಯ ಯೋಜನೆ, ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ವಿಶೇಷ ಘಟಕ ಯೋಜನೆಯಡಿ ೧ನೇ ಏಪ್ರಿಲ್ ೧೯೮೭ರಿಂದ ೩೧ನೇ ಮಾರ್ಚಿ ೧೯೯೦ರ ಅಂತ್ಯದವರೆವಿಗೆ ಬೆಳಗಾಂ ತಾಲ್ಲೂಕಿನ ಬಾಗೇವಾಡಿ, ಉಚ್ಚಗಾವ್ ಗ್ರಾಮಗಳಲ್ಲಿ ಮತ್ತು ಖಾನಾಪುರ ತಾಲ್ಲೂಕಿನಲ್ಲಿ ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ಎಷ್ಟು ಬಾವಿಗಳ ಸರಿಯಾಗಿ ಕೆಲಸ ನಿರ್ವಹಿಸುತ್ತಿವೆ ? ಹಾಗೂ ಎಷ್ಟು ಬಾವಿಗಳು ಕೆಲಸ ನಿರ್ವಹಿಸುತ್ತಿಲ್ಲ ?

ಇ) ಈ ಕೊಳವೆ ಬಾವಿಗಳನ್ನು ಕೊರೆದ ಗುತ್ತಿಗೆದಾರ ಕಂಪನಿಗಳ ಹೆಸರು ಹಾಗೂ ಬಿಡಿಭಾಗಗಳನ್ನು ಪೂರೈಸಿರುವ ಕಂಪನಿಗಳು ಯಾವುವು ?

ಈ) ಕೊಳವೆ ಬಾವಿಗಳ ಬ್ಯಾಂಕ್ ಸಾಲ ಮಂಜೂರಾತಿಯಾಗಿದ್ದು, ಈ ಕೆಳವೆ ಬಾವಿಗಳು ಧಾರಣೆಯಲ್ಲಿದ್ದ ನಿರುಪಯುಕ್ತವಾಗಿದ್ದಲ್ಲಿ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ?